ಮಾತಾಲ್ಲಿ ಕೂಗಾಡಿದ. ಕೈಗೆ ಸಿಕ್ಕಿದ್ರಲ್ಲಿ ಚೆನ್ನಾಗಿ ಹೊಡೆದ. ಹೊಡೆದು ಹೊಡೆದು ಸಾಕಾಗಿ ಅಳ್ತ ಕೂತ. ಉಣ್ಣದೆ ಹಾಗೆ ಮಲಗಿದ. ನಿಧಾನಕ್ಕೆ ವಿಷ್ಯ ತಿಳ್ದು ಸಾವಿತ್ರಿಗೆ ತಲೆ ತಿರುಗಿದಂತಾಯ್ತು. ಕಣ್ಣು ಕತ್ಲು ಕತ್ಲಾಗಿ ಕುಸಿದು ಕೂತಳು. ದುಃಖ ಉಕ್ಕಿ ಬಿಕ್ಕಳಿಸಿ ಅತ್ತಳು. 'ಹನ್ಮಪ್ಪನಾಣೆಗೂ ನಾನ್ ತಪ್ಪು ಮಾಡಿಲ್ರಿ...' ಅಂತ ಎಷ್ಟು ಹೇಳಿದ್ರು ಕೇಳದ ಸಣ್ಣೀರ ಅಳುತ್ತಲೆ ಮಲಗಿದ. ಬಸ್ಯಗೆ ಏನಂದೂ ಗೊತ್ತಾಗದೆ ಪಿಳಿಪಿಳಿ ಕಣ್ ಬಿಡುತ್ತಾ ನೋಡಿ ನೋಡಿ ಉಣ್ಣದೇ ಹಾಗೆ ನಿದ್ದೆಗೆ ಜಾರಿದ.

ಊರಲ್ಲಿ ಹಬ್ಬಿದ ಪಟೇಲ್ರು ಮತ್ತು ಸಾವಿತ್ರಿ ನಡುವಿನ ಸಂಬಂಧದ ಸುದ್ದಿ ಪಟೇಲರ ಹೆಂಡತಿ ಕಮಲಿಯನ್ನು ಮುಟ್ಟುವುದು ತಡವಾಗಿರಲಿಲ್ಲ. ಈ ಮೊದಲು ಪಟೇಲರ ಬಗ್ಗೆ ಇಂತಹ ಸುದ್ದಿಗಳು ಬಂದಾಗಲೂ ಕಮಲಿ ಗಲಾಟೆ ಮಾಡಿದ್ದಳು. ಈಗ ಊರಿಗೆ ಊರೇ ಸಾವಿತ್ರಿ ವಿಷ್ಯ ಮಾತಾಡುವಾಗ ಕಮಲಿಗೆ ಹೊಟ್ಟೆಗೆ ಬೆಂಕಿ ಬಿದ್ದ ಹಾಗೆ ಆಗಿತ್ತು. ಗಂಡನನ್ನು ಹಾದಿಗೆ ತರಲು ಏನೇ ಪ್ರಯತ್ನ ಮಾಡಿದರೂ ಪಟೇಲರು ಅವಳ ಹಾದಿಗೆ ಬರಲಿಲ್ಲ. ಈಗೀಗಂತಲೂ ಅವರಿಬ್ಬರು ಬೇರೆಯೇ ಮಲಗುತ್ತಿದ್ದರು. ಪಟೇಲರನ್ನು ದೂರ ಇಟ್ಟೆ ಮಲಗುತ್ತಿದ್ದಳು. ಪಟೇಲ ಒಂದೆರೆಡು ಬಾರಿ ಅವಳ ಸೊಂಟ ತೀಡಿ ಅವಳಿಂದ ಉಗಿಸಿಕೊಂಡು ಸುಮ್ಮನಾಗಿದ್ದ. ಅವಳಿಗೆ ಮನೆಯಿಂದ ಹೊರಗೆ ಹೋಗಲು ಅವಮಾನವಾದಂತಾಗುತ್ತಿತ್ತು.

ಬೆಳಗ್ಗೆ ಎದ್ದ ಸಣ್ಣೀರ ಏನೂ ಆಗಿಲ್ದೋರು ತರಹನೇ ಇದ್ದ. ಉಂಡು ಪಟೇಲ್ರ ಹೊಲಕ್ಕೆ ಹೊರಟು ಹೋದ. ಸಾವಿತ್ರಿ 'ನಾ ಬರಲ್ಲ' ಅಂತ ಹಟ ಹಿಡಿದಿದ್ದಳು. ಅವಳನ್ನು ಬಿಟ್ಟು ತಾನೊಬ್ನೆ ಹೋದ. ಹೊಲ್ದಾಗೆ ಗೇದು ಗೇದು ಸಂಜೆಗೆ ಸಾರಾಯಿ ಹಾಕ್ಕೊಂಡು ಮನೇಗೆ ಬಂದು ಮತ್ತೆ ಸಾವಿತ್ರಿಗೆ ಹೊಡೆದ. 'ಇವತ್ತು ಎಲ್ಲಿ ಹೋಗಿದ್ರೆ ಮಲ್ಗಾಕೆ?' ಅಂತ ಕೇಳಿ ಕೇಳಿ ಹೊಡೆದ. ಸಾವಿತ್ರಿಯ ಯಾವ ಮಾತು ಅವನ ಕಿವಿಗೆ ತಲುಪುತ್ತಿರಲಿಲ್ಲ. ಊರಲ್ಲಿ ಹಬ್ಬಿದ್ದ ಸುದ್ದಿಯೇ ಅವನ ಕಿವಿಯೊಳಗೆ ತುಂಬಿದ್ದರಿಂದ ಯಾವ ಮಾತು ಅವನಿಗೆ ಕೇಳುತ್ತಿರಲಿಲ್ಲ. ಇದು ದಿನೇ ದಿನೇ ಜಾಸ್ತಿನೆ ಆಗತೊಡಗಿತು. ಕುಡಿತವೂ ಹೆಚ್ಚಾಗಿ ಹೋಯ್ತು. ಮನೆಗೆ ಹೊಟ್ಟೆ ತುಂಬಾ ಕುಡಿದೇ ಬರೋನು, ಹೆಂಡ್ತಿಗೆ ಹೊಡೆಯೋನು. ದಿನಾ ದಿನಾ ಹೆಂಡ್ತಿ ಬಟ್ಟೆ ಬಿಚ್ಚಿಸಿ ಮೊಲೆ ಮೇಲೆ, ತೊಡೆ ಮೇಲೆ ಪಟೇಲರ ಹಲ್ಲಿನ ಗುರುತುಗಳಿವೆಯೇ ಎಂದು ಹುಡ್ಕೊನು. ಕುಡಿತವಂತೂ ವಿಪರೀತವಾಗಿ ಸಣ್ಣೀರನ ದೇಹಸ್ಥಿತಿ ಕೇಡುತ್ತಾ ಬಂತು. ಸರಿಯಾಗಿ ಉಣ್ಣದೇ ಬರೀ ಕುಡೀತಾ ದಿನ ಕಳೀತಿದ್ದ ಸಣ್ಣೀರ ಒಂದಿನ ಚರಂಡಿಯಲ್ಲಿ ಬಿದ್ದೋನು ಮೇಲೆ ಏಳಲೇ ಇಲ್ಲ. ಸಾವಿತ್ರಿ ಅವನನ್ನು ಹೊತ್ತುಕೊಂಡು ಆಸ್ಪತ್ರೆ ತಿರುಗಿ ಕೊನೆಗೆ ಅವನ ಹೆಣಹೊತ್ತುಕೊಂಡು ಊರಿಗೆ ಬರಬೇಕಾಯ್ತು. ಒಂಬತ್ತು ವರ್ಷದ ಮಗ ಬಸ್ಯನನ್ನು, ಹೆಂಡ್ತಿ ಸಾವಿತ್ರಿಯನ್ನು ಬಿಟ್ಟು ಸಣ್ಣೀರ



ನೋವಲ್ಲೆ ತೀರಿಹೋದ. ಹಿಲಾಲು ಹಿಡಿಯೊರು ಇಲ್ಲದೆ ಹನ್ಮಪ್ಪ ಗುಡೀಲೆ ಉಳಿಯುವಂತಾಯ್ತು.

* * *

ಆರಡಿ ಎತ್ತರದ, ಅಗಲ ಮೈಯಿಯ ಪಟೇಲ್ರು ಶನಿವಾರ, ಸೋಮವಾರ ಒಂದು ಧೋತಿ ತೊಟ್ಟು ಅಂಗಿ ಇಲ್ಲದ ಖಾಲಿ ಮೈಗೆ ಗಂಧ ನಾಮ ಉದ್ದಕ್ಕೆ ಬಳ್ಕೊಂಡು ಕೊರಳಾಗೆ ರುದ್ರಾಕ್ಷಿ ತೊಟ್ಟು ಕೇರಿಯಲ್ಲಿ ನಡೆದು ಹೋಗ್ತಿದ್ರೆ ಇವರೇ ದೇವ್ರು ಅನ್ನಂಗೆ ಕಾಣ್ತಾ ಇದ್ದರು. 'ನಾ ಪಂಚಾಯತಿ ಹೇಳ್ವಾಗ ನಂಗೆ ದೇವ್ರ ಅನುಗ್ರಹ ಇರ್ತೈತಿ. ನಂಗ ಬೈದ್ರಾ ಸುಳ್ ಹೇಳಿದ್ರಾ ನಿಮ್ಗೆ ಒಳ್ಳೇದ್ ಆಗಲ್ಲ' ಅಂತ ಪುಕಾರು ಹಬ್ಬಿಸಿದ್ದ. ಸಣ್ಣೀರ ಸತ್ತಿದ್ದು, ಹಿಲಾಲು ಹಿಡಿಯಲು ಹೊಸಬರನ್ನು